# ಕೆಂಪು ಕಾಲಿನ ಚಾಣ





ಸೈಬೀರಿಯಾದಿಂದ ದಕ್ಷಿಣ ಆಫ್ರಿಕಾವರೆಗೆ ಪ್ರತಿವರ್ಷ ಸುದೀರ್ಘ 22 ಸಾವಿರ ಕಿ.ಮೀ ವರೆಗೆ ವಲಸೆ ಹೋಗುವ ಹಕ್ಕಿಗಳಿವು. ಕಾರವಾರದಲ್ಲಿ ನವೆಂಬರ್ ತಿಂಗಳ ಆರಂಭದಲ್ಲೇ ನೂರಾರು ಹಕ್ಕಿಗಳು ಬಂದಿಳಿದಿವೆ.

ಚಿತ್ರ– ಲೇಖನ: **ಪುಟ್ಟರಾಜು, ಕೈಗಾ**



ವಲಸೆ ಹಕ್ಕಿಗಳ ಜೀವ ಜಗತ್ತಿನಲ್ಲಿ ಸಂಚಲನ ಸೃಷ್ಟಿಸಿದ, ರೋಮಾಂಚಕಾರಿ ಘಟನೆ ಮತ್ತು ವಿಷಯ ಹೊತ್ತು ತರುವ ಹಕ್ಕಿ ಇದು. ಇದನ್ನು ಕನ್ನಡದಲ್ಲಿ ಕೆಂಪು ಕಾಲಿನ ಚಾಣ ಮತ್ತು ಇಂಗ್ಲಿಷ್‌ನಲ್ಲಿ ಅಮೂರ್ ಫಾಲ್ಕನ್ ಎನ್ನುತ್ತಾರೆ. ಇದರ ವೈಜ್ಞಾನಿಕ ಹೆಸರು **Falco amurensis.** ನವೆಂಬರ್ ತಿಂಗಳಲ್ಲಿ ಇದು ಕಾರವಾರಕ್ಕೆ ವಲಸೆ ಬರುತ್ತದೆ. ಕರ್ನಾಟಕದ ಪಕ್ಷಿಪ್ರೇಮಿಗಳು ಇದರ ಆಗಮನಕ್ಕಾಗಿ ಕಾತರದಿಂದ ಕಾಯುತ್ತಿರುತ್ತಾರೆ.

ಹಿಂಸ್ರ ಪಕ್ಷಿಗಳ ಪೈಕಿ ಅತಿ ದೂರ ವಲಸೆ ಹೋಗುವ ಪಕ್ಷಿಯಿದು. ದಕ್ಷಿಣ ಪೂರ್ವದ ಸೈಬೀರಿಯದಿಂದ ಪ್ರಾರಂಭವಾಗಿ, ಉತ್ತರ ಚೈನಾದಿಂದ ದಕ್ಷಿಣ ಆಫ್ರಿಕಾಕ್ಕೆ 22,000 ಸಾವಿರ ಕಿ.ಮೀ ಪ್ರತಿ ವರ್ಷ ವಲಸೆ ಹೋಗುತ್ತದೆ. ಪಾರಿವಾಳಕ್ಕಿಂತ ತುಸು ದೊಡ್ಡದಾದ ಈ ಹಕ್ಕಿ 22,000 ಕಿ.ಮೀ ವರೆಗೆ ಕ್ರಮಿಸಲು ಹಲವು ದಿನಗಳಿಂದ ತಿಂಗಳುಗಳು ಬೇಕು. ಅತಿ ಎತ್ತರದ ಹಿಮಾಲಯ ಪರ್ವತವನ್ನು ದಾಟಿ ವಲಸೆಯ ಹಾದಿಯಲ್ಲಿ ಭಾರತದ